VIJAYAKUMAR KANNUR
Digitally signed by VIJAYAKUMAR KANNUR
Date: 2026.01.13 10:34:05 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 12.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ KKG ವಕೀಲರಿಂದ :**

ಆರೋಪಿಯು ಬಾಂಡೆ ವ್ಯಾಪಾರ ಮಾಡುವ ಉದ್ಯೋಗ ಮಾಡುತ್ತಿರುವಳು. ಅದಕ್ಕೆ ಬಹಳಷ್ಟು ದೊಡ್ಡ ಮೊತ್ತದ ಬಂಡವಾಳ ಹಾಕುವ ಅವಶ್ಯಕತೆ ಇರುವುದಿಲ್ಲ ಎಂದರೆ ಅದರ ಬಗ್ಗೆ ತನಗೆ ಗೊತ್ತಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ರೂ. 50 ಸಾವಿರ ಹಣದ ಮಾತ್ರ ಬಂಡವಾಳ ಅವಶ್ಯಕತೆ ಇರುತ್ತದೆ ಎಂದರೆ ಜಾಸ್ತಿ ಇರುತ್ತದೆ ಎಂದು ಸಾಕ್ಷಿ ಉತ್ತರಿಸುವರು. ಅಂದರೆ ಸುಮಾರು 2-3 ಲಕ್ಷದ ಹಣ ಅವಶ್ಯತೆ ಇರುತ್ತದೆ. ಆರೋಪಿತಳು ಮತ್ತು ದೂರುದಾರನ ನಡುವೆ ರೂ. 2 ಲಕ್ಷ 50 ಸಾವಿರಕ್ಕೆ ವ್ಯಾಪಾರ ಆಗಿರುವುದು. ದೂರುದಾರ ಒಕ್ಕಲತನ ಉದ್ಯೋಗ ಮಾಡುತ್ತಾನೆ. ಇದನ್ನು ಹೊರತು ಪಡಿಸಿ ಬೇರೆ ಉದ್ಯೋಗ ಮಾಡುವುದಿಲ್ಲ. ಆರೋಪಿತಳು ಸಣ್ಣ ಮೊತ್ತದ ಬಂಡವಾಳ ಮಾಡುತ್ತಿರುವುದರಿಂದ ಅವಳಿಗೆ ಈ ದೂರಿನಲ್ಲಿ ಹೇಳಿರುವಂತೆ ರೂ. 2 ಲಕ್ಷ 50 ಸಾವಿರ ಹಣ ಪಡೆದುಕೊಳ್ಳುವ ಯಾವುದೇ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ.  ದೂರುದಾರ ರೂ. 2 ಲಕ್ಷ 50 ಸಾವಿರ ಹಣ ಸಾಲವಾಗಿ ನೀಡುವ ಆರ್ಥಿಕ ಸಾಮರ್ಥ್ಯ ಹೊಂದದಿರುವರು. ಈ ವ್ಯವಹಾರ ಮಾಡುವ ಸಮಯದಲ್ಲಿ ನಾನು ಹಾಜರಿದ್ದೇನು. 2023 ನೇ ಸಾಲಿನಲ್ಲಿ ಆರೋಪಿತಳು ಮತ್ತು ದೂರುದಾರನ ಮಧ್ಯೆ ಪಿರ್ಯಾದಿಯ ಮನೆಯಲ್ಲಿ ಆಗಿರುವುದು.

2. ಆರೋಪಿತಳು ರೂ. 3 ಲಕ್ಷ ಹಣ ನೀಡುವಂತೆ ಕೇಳಿದ್ದು, ಆದರೆ ದೂರುದಾರ ರೂ. 2 ಲಕ್ಷ 50 ಸಾವಿರ ಹಣ ನೀಡಿರುವನು. ಈ ಹಣದ ಭದ್ರತೆಗಾಗಿ ದೂರುದಾರ ಬಾಂಡ್ ಮತ್ತು ಚೆಕ್ ಗಳನ್ನು ಪಡೆದುಕೊಂಡಿರುವನು. ಆ ಬಾಂಡ ಖುಲ್ಲಾ ಬಾಂಡ ಇರುವುದೋ ಅಥವಾ

ಅದರಲ್ಲಿ ಏನು ಬರೆದಿರುವರು ಎಂದು ನನಗೆ ಮಾಹಿತಿ ಇರುವುದಿಲ್ಲ, ಆದರೆ ಚೆಕ್ ಬರೆದು ಕೊಟ್ಟಿರುವಳು. ಆರೋಪಿತಳು ನಮ್ಮ ಸಮಕ್ಷಮದಲ್ಲಿ ಆ ಸಮಯದಲ್ಲಿ ಚೆಕ್ ನ್ನು ಬರೆದುಕೊಟ್ಟಿರುವಳು. ಈ ವ್ಯವಹಾರ ಆಗುವ ಸಮಯದಲ್ಲಿ ದೀಲಿಪ್ ಪಡೆಕರ ಎಂಬುವವನು ಸಹ ಹಾಜರಿದ್ದನು. ಆ ದಿನ ಆರೋಪಿತಳು ಚೆಕ್ ನ ಮೇಲೆ ಸಹಿ ಮಾಡುವುದಲ್ಲದೇ ಅದರ ಮೇಲೆ ಮೊತ್ತವನ್ನು ಸಹ ನಮೂದು ಮಾಡಿ ಕೊಟ್ಟಿರುವಳು. ಆರೋಪಿತಳು ತಾನು ಪಡೆದಿರುವ ಸಾಲದ ಹಣದ ಮೇಲೆ ಯಾವುದೇ ಬಡ್ಡಿ ನೀಡಿರುವುದಿಲ್ಲ. ಆ ಹಣವನ್ನು 6 ತಿಂಗಳ ಅವಧಿಯೊಳಗಾಗಿ ಮರಳಿ ನೀಡುವುದಾಗಿ ಎಂದು ಹೇಳಿರುವಳು. ರೂ. 2 ಲಕ್ಷ 50 ಸಾವಿರ ಹಣದ ಮೇಲೆ ಆರೋಪಿತಳು ದೂರುದಾರನಿಗೆ ಸಾಕಷ್ಟು ಬಡ್ಡಿಯನ್ನು ಸಹ ನೀಡಿರುವಳು ಎಂದರೆ ಅದರ ಬಗ್ಗೆ ತನಗೆ ಗೊತ್ತಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು.

3. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ ಹಾಕಲು ದೂರುದಾರ ಮಾಹಿತಿ ನೀಡಿರುವನು ಎಂದರೆ ಸರಿ. ಈ ಪ್ರಮಾಣ ಪತ್ರಕ್ಕೆ ನನ್ನ ಸ್ವಂತ ಮಾಹಿತಿ ಇರುವುದಿಲ್ಲ ಎಂದರೆ ಸರಿ . ಆದರೆ ಆ ವ್ಯವಹಾರದಲ್ಲಿ ನಾನು ಇದ್ದೇನು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ